# <u>ಕರ್ನಾಟಕ ಲೋಕಾಯುಕ್ತ</u>

**ಸಂ.ಕಂಪ್ಲೇಂಟ್.ಉಪಲೋಕ್/ಬಿ.ಎಲ್.ಬಿ-1317/2015/ಡಿಆರ್‌ಇ-5**

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:01-12-2017.

## <u>*ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*</u>

ವಿಷಯ: ಶ್ರೀ ಕೆ. ನಿಂಗಪ್ಪ ತಂದೆ ಕರಿಯಪ್ಪ, ವಾಸ: ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಕೆ. ನಿಂಗಪ್ಪ ತಂದೆ ಕರಿಯಪ್ಪ, ವಾಸ: ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಎಂ. ಪುಷ್ಪರಾಜ, ಹಿಂದಿನ ತಹಶೀಲ್ದಾರರು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಮತ್ತು (2) ಶ್ರೀ ಚಂದ್ರಶೇಖರ, ತಹಶೀಲ್ದಾರರು, ಸಂಡೂರು ತಾಲ್ಲೂಕು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತಾರಾನಗರದ ಸರ್ವೆ ನಂ.238, ಗೌರಿಪುರದ ಸರ್ವೆ ನಂ.104, ಬನಹಟ್ಟಿ ಸರ್ವೆ ನಂ.24, ಎರೇನಹಳ್ಳಿಯ ಸರ್ವೆ ನಂ.215 ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, ಶ್ರೀಮಂತಷಾಯಿಗಳು ಅಕ್ರಮವಾಗಿ ಪಹಣಿ ಹೊಂದಿರುವುದರನ್ನು ಸಹಾಯಕ ಆಯುಕ್ತರು, ವಿಚಾರಣೆ ನಡೆಸಿ ಪಹಣಿಗಳನ್ನು ರದ್ದುಪಡಿಸಿದ್ದಾರೆ, ಆದರೆ ಇದರಲ್ಲಿ ಕೆಲವು ಪಹಣಿಗಳು ರದ್ದಾಗಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸ್ಥಳ ತನಿಖೆ ನಡೆಸಿ ಅಕ್ರಮ ಪಹಣಿಗಳನ್ನು ಸರಿಪಡಿಸಿಕೊಡುವಂತೆ ಕೋರಿರುತ್ತಾರೆ.

3. ಈ ಪ್ರಕರಣದ ದೂರನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರಿಗೆ ದೂರುದಾರರ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ ದಾಖಲೆಗಳನ್ನೊಳಗೊಂಡ ನಿರ್ದಿಷ್ಟವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

4. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ಭಾಗಶಃ ವರದಿಯನ್ನು ಸಲ್ಲಿಸಿ ಸಹಾಯಕ ಆಯುಕ್ತರು, ಬಳ್ಳಾರಿ ಇವರಿಗೆ ವರದಿಯನ್ನು ಸಲ್ಲಿಸುವಂತೆ ತಿಳಿಸಿದ್ದರು. ಸಹಾಯಕ ಆಯುಕ್ತರು, ಬಳ್ಳಾರಿ ಇವರು ತಮ್ಮ ವರದಿಯನ್ನು ಸಲ್ಲಿಸಿ, ಸಂಡೂರು ತಾಲ್ಲೂಕಿನ ಎರೇಯ್ಯನಹಳ್ಳಿ ಗ್ರಾಮದ

ಸರ್ವೆ ನಂ.315 ರಲ್ಲಿ 5 ಎಕರೆ ಜಮೀನಿಗೆ ಹೊಂದಿದ್ದ ಅಕ್ರಮ ಸಾಗುವಳಿ ಚೀಟಿ ಮತ್ತು ಪಟ್ಟಾವನ್ನು ರದ್ದುಪಡಿಸಲಾಗಿದೆ. ಹಕ್ಕು ಬದಲಾವಣೆಯ ಆದೇಶಗಳನ್ನು ರದ್ದುಪಡಿಸಲಾಗಿದೆ ಎಂದು ವರದಿಯನ್ನು ಸಲ್ಲಿಸಿದ್ದಾರೆ. ತಾರಾನಗರದ ಸರ್ವೆ ನಂ.238, ಗೌರಿಪುರದ ಸರ್ವೆ ನಂ.104, ಬನ್ನಿಹಟ್ಟಿ ಗ್ರಾಮದ ಸರ್ವೆ ನಂ.224 ಇವುಗಳಿಗೆ ಸಂಬಂಧಿಸಿದ ಅಕ್ರಮ ಹಕ್ಕು ಬದಲಾವಣೆಯ ಬಗ್ಗೆ ಕ್ರಮ ಕೈಗೊಂಡು ಪಹಣಿಗಳಲ್ಲಿ ಕರ್ನಾಟಕ ಸರ್ಕಾರ ಅಂತ ನಮೂದಿಸಲಾಗಿದೆ ಅಂತ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ವರದಿಯನ್ನು ಸಲ್ಲಿಸಿದ್ದಾರೆ. ಆದರೆ, ಯಾರ ತಪ್ಪಿನಿಂದ ಖಾತೆಗಳು ಬದಲಾವಣೆಗಳು ಆಗಿವೆ ಎನ್ನುವ ಬಗ್ಗೆ ವಿವರಣೆಗಳನ್ನು ಸಲ್ಲಿಸಿರಲಿಲ್ಲ. ಆದ್ದರಿಂದ ಈ ಬಗ್ಗೆ ಪುನಃ ಮಾಹಿತಿಯನ್ನು ಕೇಳಲಾಗಿದೆ.

5. ಅದರಂತೆ ಜಿಲ್ಲಾಧಿಕಾರಿಗಳು ಬಳ್ಳಾರಿ ಜಿಲ್ಲೆ ಇವರು ತಮ್ಮ ವರದಿಯನ್ನು ಸಲ್ಲಿಸಿದ್ದು, 5 ಜನ ಕೆಳ ಹಂತದ ನೌಕರರ ತಪ್ಪಿನಿಂದ ಪಹಣಿಗಳಲ್ಲಿ ಈ ರೀತಿಯ ನಮೂದುಗಳು ಉಂಟಾಗಿವೆ. ಅವರಲ್ಲಿ ಕ್ರಮವಾಗಿ 2008, 2014 ಮತ್ತು 2015 ರಲ್ಲಿ ನಿವೃತ್ತರಾಗಿದ್ದಾರೆ. ಕಂದಾಯ ನಿರೀಕ್ಷಕರಾದ ಶ್ರೀ ಪರಮೇಶ್ವರಪ್ಪ ಇವರು ಮರಣ ಹೊಂದಿದ್ದಾರೆ. ಗ್ರಾಮ ಲೆಕ್ಕಿಗರಾದ ಶ್ರೀ ಹೊನ್ನುರು ಪಾಷಾ ಇವರು ಅಮಾನತ್ತಿನಲ್ಲಿರುತ್ತಾರೆ. ಸಹಾಯಕ ಆಯುಕ್ತರು, ಬಳ್ಳಾರಿ ಇವರಿಗೆ ಸದರಿ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಈಗಾಗಲೇ ಸೂಚಿಸಲಾಗಿದೆ ಅಂತ ನಮುದಿಸಿದ್ದಾರೆ.

6. ಸಹಾಯಕ ಆಯುಕ್ತರು, ಬಳ್ಳಾರಿ ಇವರು ತಮ್ಮ ವರದಿಯನ್ನು ಸ್ಲಲಿಸಿದ್ದು, ಅದರಲ್ಲಿ ಶ್ರೀ ಹೆಚ್. ಗಂಗಣ್ಣ, ಕಂದಾಯ ನಿರೀಕ್ಷಕರು, ಚೋರನೂರು ಇವರು ಪಹಣೆಗಳಲ್ಲಿ ಬದಲಾವಣೆಗಳಾಗಲೂ ಮೂಲ ಕಾರಣಕರ್ತರಾಗಿದ್ದಾರೆ. ಜಿಲ್ಲಾಧಿಕಾರಿಗಳು ಶಿಸ್ತುಪ್ರಾಧಿಕಾರಿ ಆಗಿರುವದರಿಂದ, ಅವರಿಗೆ ಕ್ರಮ ತೆಗೆದುಕೊಳ್ಳಲು ಕೋರಲಾಗಿರುತ್ತದೆ ಅಂತ ನಮೂದಿಸಿದ್ದಾರೆ.

7. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ತಮ್ಮ ವರದಿಯನ್ನು ಪುನಃ ಸಲ್ಲಿಸಿದ್ದು, ಅನಧಿಕೃತ ಹಕ್ಕು ಬದಲಾವಣೆಗಳನ್ನು ಮಾಡಿರುವ ಶ್ರೀ ಹೆಚ್.ಗಂಗಣ್ಣ ಕಂದಾಯ ನಿರೀಕ್ಷಕರು, ದಿನಾಂಕ: 31-5-2014 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದಾರೆ, ಅವರ ವಿರುದ್ಧ 214(2)(ಬಿ)(ii) ಅಡಿಯಲ್ಲಿ ಕ್ರಮ ವಹಿಸಲು ಬರುವುದಿಲ್ಲ. ಆದ್ದರಿಂದ, ಕಲಂ 192(ಎ) ಕರ್ನಾಟಕ ಭೂ ಕಂದಾಯ ಅಧಿನಿಯಮದಡಿಯಲ್ಲಿ ಕ್ರಮವಹಿಸಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವಂತೆ ತಹಶೀಲ್ದಾರರಿಗೆ ನಿರ್ದೇಶನ ಕೊಡಲಾಗಿದೆ ಅಂತ ತಿಳಿಸಿದ್ದಾರೆ.

8. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. 2004 ರಲ್ಲಿ ಆಗಿರುವ ಹಕ್ಕು ಬದಲಾವಣೆಯನ್ನು ದೂರುದಾರರು 2015 ರಲ್ಲಿ ಪ್ರಶ್ನಿಸಿದ್ದಾರೆ. ಆದರೆ ಈ ಎಲ್ಲಾ ಸರ್ವೆ ನಂಬರುಗಳು ಸರ್ಕಾರಕ್ಕೆ ಸೇರಿರುವುದರಿಂದ ಮತ್ತು ಸರ್ವೆ ನಂ.315 ರಲ್ಲಿ ಆಗಿರುವ ಬದಲಾವಣೆಗಳಿಗೆ ಶ್ರೀ ಹೆಚ್. ಗಂಗಣ್ಣ ಎನ್ನುವ ಕಂದಾಯ ನಿರೀಕ್ಷಕರು ಕಾರಣೀಭೂತರಾಗಿದ್ದಾರೆ ಅಂತ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರಿಗೂ ಸಹ ಮನವರಿಕೆಯಾಗಿವುದರಿಂದ, ಸರ್ಕಾರಿ ಜಮೀನನ್ನು ಯಾವುದೇ ಸರ್ಕಾರದ ಅಥವಾ ಮೇಲಾಧಿಕಾರಿಗಳ ಆದೇಶವಿಲ್ಲದೇ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿರುವುದರಿಂದ, ಕಲಂ 192(ಎ) ಕರ್ನಾಟಕ ಭೂಕಂದಾಯ ಅಧಿನಿಯಮ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ವಿಷಯದಲ್ಲಿ ತಹಶೀಲ್ದಾರರು ಸಂಡೂರು ಇವರು ಏನು ಕ್ರಮ ಜರುಗಿಸಿದ್ದಾರೆ ಎನ್ನುವ ಬಗ್ಗೆ ಮುಂದುವರೆದ ವರದಿಯನ್ನು ಸಲ್ಲಿಸುವಂತೆ ತಹಶೀಲ್ದಾರರು ಸಂಡೂರು ಇವರಿಗೆ ಗೌರವಾನ್ವಿತರ ಆದೇಶದಂತೆ ಸೂಚಿಸಲಾಗಿತ್ತು.

9. ಅದರಂತೆ, ತಹಶೀಲ್ದಾರರು ಸಂಡೂರು ತಾಲ್ಲೂಕು ಇವರು ತಮ್ಮ ವರದಿಯನ್ನು ಸಲ್ಲಿಸಿದ್ದು, ಶ್ರೀ ಹೆಚ್. ಗಂಗಣ್ಣ ನಿವೃತ್ತ ಕಂದಾಯ ನಿರೀಕ್ಷಕರು, ಚೋರನೂರು ಇವರ ವಿರುದ್ಧ ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 192(ಎ) ಅಡಿಯಲ್ಲಿ ಗುಡೆಕೋಟೆ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗಿದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ.

10. ದೂರುದಾರರು ಈ ದೂರನ್ನು ಹಿಂದಿನ ತಹಶೀಲ್ದಾರರು ಮತ್ತು ದೂರು ಸಲ್ಲಿಸುವಾಗ ಕರ್ತವ್ಯ ನಿರ್ವಹಿಸುತ್ತಿದ್ದ ತಹಶೀಲ್ದಾರರು ಸಂಡೂರು ತಾಲ್ಲೂಕು ಇವರ ವಿರುದ್ಧ ಸಲ್ಲಿಸಿದ್ದಾರೆ. ಸಂಡೂರು ತಾಲ್ಲೂಕಿನ ತಾರಾನಗರದ ಸರ್ವೆ ನಂ.238, ಗೌರಿಪುರದ ಸರ್ವೆ ನಂ.104, ಬನಹಟ್ಟಿ ಗ್ರಾಮದ ಸರ್ವೆ ನಂ.24, ಎರೇನಹಳ್ಳಿ ಗ್ರಾಮದ ಸರ್ವೆ ನಂ.315 ಇವುಗಳು ಸರ್ಕಾರಿ ಜಮೀನುಗಳಾಗಿವೆ ಎನ್ನುವುದು ಸಹಾಯಕ ಆಯುಕ್ತರು, ಬಳ್ಳಾರಿ ಇವರ ವರದಿಯಿಂದ ತಿಳಿಯುತ್ತದೆ. ಸಹಾಯಕ ಆಯುಕ್ತರು, ಬಳ್ಳಾರಿ ಇವರು ಪಹಣಿಗಳಲ್ಲಿ ಕರ್ನಾಟಕ ಸರ್ಕಾರ ಅಂತ ನಮೂದಿಸಲಾಗಿದೆ ಅಂತ ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದಾರೆ, ಆದರೆ ಈ ಎಲ್ಲಾ ಜಮೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆಯೇ ಎನ್ನುವ ಬಗ್ಗೆ ಮಾಹಿತಿಯು ಎಲ್ಲಿಯೂ ಕಂಡುಬರುತ್ತಿಲ್ಲ.

11. ಮೇಲ್ಕಂಡ ಅಧಿಕಾರಿಗಳು ಸಲ್ಲಿಸಿರುವ ವರದಿಗಳನ್ನು ಮತ್ತು ಎಲ್ಲಾ ಅಂಶಗಳನ್ನು ಪರಿಗಣಿಸಿ, ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತಾರಾನಗರದ ಸರ್ವೆ ನಂ.238, ಗೌರಿಪುರದ ಸರ್ವೆ ನಂ.104, ಬನಹಟ್ಟಿ ಗ್ರಾಮದ ಸರ್ವೆ ನಂ.24, ಎರೇನಹಳ್ಳಿ ಗ್ರಾಮದ ಸರ್ವೆ

ನಂ.315 ಈ ಎಲ್ಲಾ ಸರ್ಕಾರಿ ಜಮೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸೂಕ್ತ ಕಾನೂನು ಕ್ರಮವನ್ನು ಜರುಗಿಸುವಂತೆ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/12/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ